ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Wednesday the 14th July 1982/Ashada 23, 1904. S.E.

The House met in the Assembly Chamber, Vidhana Soudha, at Nine of the Clock.

MR. SPEAKER (SRI K. H. RANGANATH) in the Chair.

STARRED QUESTIONS

(to which oral answers were given)

Misappropriation of funds in Karnataka Film Industry Development Corporation Ltd.

1 SRI T. B. JAYACHANDRA (Kallambella).—Will the Minister of State for Information and Youth Services be pleased to state :—

(a) the money invested on Janatha Theatrs financed by K.F.I.D.C. and the returns ;

(b) whether there is any misappropriation or loss in the Corporation ;

(c) if so the action taken to realise the misappropriated amount or cut short the loss ;

(d) whether the Government is going to examine the matters relating to films like giving subsidy, tax free and documentary films, as the K.F.I.D.C. is meant for development of films ?

SRI K. GANGADHAR (Minister of State for Information and Youth Services).—

(a) Total investment of Janatha theatres. Rs. 23,64,132

Returns :	(a) Repayment of as on 31-3-1981 Principal	...	57,981-75
	(b) Interest	...	8,18,547-70
	Total	...	8,76,529-45

(b) The Audited Accounts of the Corporation have been completed upto the year 1977-78. The auditing of the accounts for the further periods of 1978-79 1979-80 and 1980-81 are under way. The audited accounts for the year 1977-78 do not disclose misappropriation.

Does not arise in view of reply to (2) above.

(c) The film produced by they K.F.I.D C. are also eligible to get subsidy provided the films satisfy the conditions prescribed under the subsidy rules. The Government has given 50% of entertainment tax exemption in respect of Kannada, Kodava, Konkani and Tulu films produced in the State of Karnataka. Circular instruction have been issued to all Heads of Departments on 14-12-81 to make use of the expertise available with the K.F.I.D.C as well as the Department of Information and Publicity for production of documentary films pertaining to the Department under their control by making available the funds required for the purpose to the concerned agency undertaking the production of the documentary film.

ಶ್ರೀ ಟಿ.ಬಿ. ಜಯಚಂದ್ರ.– ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಯವರು ಮಿಸ್ ಆಪ್ರೋಪ್ರಿಯೇಷನ್ ಏನೂ ಆಗಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಮತ್ತು ೧೯೭೭ರ ವರೆಗೆ ಮಾತ್ರ ಈ ಬಗ್ಗೆ ಆಡಿಟ್ ಆಗಿದೆಯೆಂದು ಹೇಳಿದ್ದಾರೆ. ಅಲ್ಲದೆ ಕರ್ನಾಟಕ ಫಿಲಂ ಡೆವೆಲಪ್–ಮೆಂಟ್ ಕಾರ್ಪೋರೇಷನ್ ವತಿಯಿಂದ ೪ ಸಿನಿಮಾಗಳನ್ನು ತೆಗೆದಿದ್ದಾರೆ ಎಂದು ಕೂಡ ಹೇಳಿದ್ದಾರೆ. ಅದಕ್ಕೆ ಹೂಡಿದಂತಹ ಬಂಡವಾಳ ಎಷ್ಟು ಎಷ್ಟು ರಿಲೀಸ್ ಮಾಡಿದ್ದಾರೆ? ಅದು ಯಾವ ವರ್ಷದ ಆಡಿಟ್‌ನಲ್ಲಿ ಬರುತ್ತದೆ? ಆದರಿಂದ ಬಂದಿರುವಕ್ಕಂತ ಲಾಭ ಏನು?

ಶ್ರೀ ಕೆ. ಗಂಗಾಧರ್.– ಮಾನ್ಯ ಅಧ್ಯಕ್ಷರೆ, ನಾವು ಈ ಫಿಲಂ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ನಿಂದ 'ಸುಳಿ', 'ಸದಾನಂದ', 'ಪ್ರೇಮಜ್ವಾಲೆ', 'ಲಕ್ಷ್ಮೀಪ್ರಸನ್ನ' ಎನ್ನುವಂತಹ ನಾಲ್ಕು ಚಿತ್ರಗಳನ್ನು ತೆಗೆದಿದ್ದೇವೆ. ಇದರಲ್ಲಿ ಸುಮಾರು ೪೮ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇದರಲ್ಲಿ ನಮಗೆ ಹಿಂದೆ ೨ ಲಕ್ಷ ಚಿಲ್ಲರೆ ರೂಪಾಯಿಗಳು ಬಂದಿದೆ. ೧೯೭೭–೭೮ರ ವರೆಗೆ ಆಡಿಟ್ ಆಗಿದೆ. ಅನಂತರದ್ದು ಆಡಿಟ್ ಆಗುತ್ತಾ ಇದೆ. ಇದರಲ್ಲಿ ಲಾಭ–ನಷ್ಟ ಎಷ್ಟಾಗಿದೆ ಎನುವಂಥಾದ್ದನ್ನು ನೋಡಬೇಕಾದರೆ ಸಂಪೂರ್ಣವಾಗಿ ಆಡಿಟ್ ರಿಪೋರ್ಟ್ ನಮಗೆ ಬರಬೇಕು.

ಶ್ರೀ ಟಿ.ಬಿ ಜಯಚಂದ್ರ.– ಸ್ವಾಮಿ ಸರ್ಕಾರದವರು ಸುಮಾರು ೪೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು ೨ ಲಕ್ಷ ರೂಪಾಯಿಗಳು ಬಂದಿದೆಯೆಂದು ಹೇಳಿದರೆ ಇದರಿಂದ ನಮ್ಮ ಸರ್ಕಾರಕ್ಕೆ ನಷ್ಟವಾಗಿದೆಯೇ ಅಥವಾ ಲಾಭವಾಗಿದೆಯೇ? ಆಡಿಟ್ ರಿಪೋರ್ಟ್ ಬಂದರೂ ಸಹ ಸರ್ಕಾರಕ್ಕೆ ಇದರಿಂದ ನಷ್ಟವಾಗಿದೆ. ಈ ರೀತಿಯಾದರೆ ಕಾರ್ಪೊರೇಷನ್ ಯಾವ ರೀತಿಯಲ್ಲಿ ಉದ್ಧಾರ ವಾಗುತ್ತದೆ?

ಶ್ರೀ ಕೆ. ಗಂಗಾಧರ್.– ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈಗಾಗಲೇ ತಿಳಿಸಿರುವಂತೆ ಚಲನ ಚಿತ್ರ ಮಂಡಲಿಯ ವತಿಯಿಂದ ಸುಮಾರು ೪ ಚಿತ್ರಗಳನ್ನು ತಯಾರು ಮಾಡಿದ್ದೇವೆ. ಇದರಲ್ಲಿ ಈಗಾಗಲೇ ೩ ಚಿತ್ರಗಳನ್ನು ಬಿಡಗಡೆ ಮಾಡಿದ್ದೇವೆ. ಇನ್ನು ಲಕ್ಷ್ಮೀಪ್ರಸನ್ನ ಎಂಬ ಚಿತ್ರವನ್ನು ಬಿಡಗಡೆ ಮಾಡಬೇಕು. ಇದರಿಂದ ಸರ್ಕಾರಕ್ಕೆ ನಷ್ಟವಾಗಿನೆ ಮತ್ತು ಹಣ ಪೋಲಾಗಿದೆ ಎನ್ನುವಂಥದ್ದು ಸ್ಪಷ್ಟ ವಾಗಿ ಎದ್ದು ಕಾಣುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ.– ಸ್ವಾಮಿ, ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. ಅದು ಏನೆಂದರೆ, ಈ ಚಿತ್ರಗಳಿಂದ ಸರ್ಕಾರಕ್ಕೆ ನಷ್ಟವಾಗಿದೆ ಹಾಗೂ ಹಣದ ದುರುಪಯೋಗ ಸಹ ಆಗಿದೆ. ಆದ್ದರಿಂದ ಇದ್ದನ್ನು ವಿಚಾರಣೆ ಮಾಡಿ ಇದರ ಲೆಕ್ಕಪತ್ರಗಳನ್ನು ತರಿಸಿ ನೋಡಿದರೆ ತಮಗೆ

ಗೊತ್ತಾಗುತ್ತದೆ. ಮತ್ತು ತಾವು ಈಗಾಗಲೇ ಎಷ್ಟು ಚಲನಚಿತ್ರ ಮಂದಿರಗಳಿಗೆ ಕಾರ್ಪೊರೇಷನ್ ವತಿಯಿಂದ ಧನಸಹಾಯ ಮಾಡಿದ್ದೀರಿ? ಮತ್ತು ಯಾವಾಗ ಧನಸಹಾಯ ಮಾಡಿದ್ದೀರಿ? ಇದರಿಂದ ಸರ್ಕಾರಕ್ಕೆ ವಾಪಸ್ಸು ಬಂದಿರುವ ಹಣ ಎಷ್ಟು? ಮತ್ತು ಈಗ ಏತಕ್ಕೆ ಚಲನಚಿತ್ರ ಮಂದಿರಗಳಿಗೆ ಧನ ಸಹಾಯ ಮಾಡುತ್ತಿಲ್ಲ? ಯಾವಾಗಿನಿಂದ ಧನಸಹಾಯ ಮಾಡುವುದನ್ನು ನಿಲ್ಲಿಸಿದ್ದೀರಿ?

ಶ್ರೀ ಕೆ. ಗಂಗಾಧರ್.– ನಮ್ಮ ರಾಜ್ಯದಲ್ಲಿ ಚಲನಚಿತ್ರ ಮಂದಿರಗಳು ಜಾಸ್ತಿ ಜಾಸ್ತಿ ಇರಬೇಕು ಎನ್ನುವಂತಹ ಉದ್ದೇಶದಿಂದ ಈ ಚಲನಚಿತ್ರ ಮಂದಿರಗಳಿಗೆ ಸರ್ಕಾರದವರು ಧನಸಹಾಯ ಮಾಡಿದ್ದಾರೆ. ಈಗಾಗಲೇ ಚಿಕ್ಕಜಾಜೂರು, ಕಡೂರು, ಬೇಲೂರು, ಕಾಗಲವಾಡಿ, ಹುಣಸೂರು ಮುಂತಾದ ಕಡೆಗಳಲ್ಲಿ ಚಲನಚಿತ್ರ ಮಂದಿರಗಳನ್ನು ಕಟ್ಟಲು ಧನಸಹಾಯ ಮಾಡಿದ್ದೇವೆ. ಇದುವರೆವಿಗೂ ಸುಮಾರು ೧೩ ಲಕ್ಷ ೫೫ ಸಾವಿರ ಚಿಲ್ಲರೆ ಹಣ ಬಂದಿದೆ. ಮತ್ತು ೨೧ ಲಕ್ಷ ೬೦ ಸಾವಿರ ಚಿಲ್ಲರೆ ಹಣ ಬರಬೇಕು. ಇದರಲ್ಲಿ ಒಟ್ಟು ಸರ್ಕಾರದವರು ಖರ್ಚು ಮಾಡಿರುವಂತಹ ಹಣ ಸುಮಾರು ೧೯ ಲಕ್ಷ ೫೪ ಸಾವಿರದ ೮೧೮ ರೂಪಾಯಿಗಳು. ಮತ್ತೆ ೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಚಿಕ್ಕಜಾಜೂರಿನಲ್ಲಿ ಒಂದು ಚಲನಚಿತ್ರ ಮಂದಿರವನ್ನು ಕಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ.– ಸ್ವಾಮಿ, ನಾನು ಕೇಳಿದ್ದು, ಈ ಚಲನಚಿತ್ರ ಮಂದಿರಗಳಿಗೆ ಧನ ಸಹಾಯವನ್ನು ಯಾವಾಗ ಮಾಡಿದ್ದೀರಿ ಮತ್ತು ಯಾವ ವರ್ಷ ಕೊಟ್ಟಿದ್ದಿರಿ, ಮತ್ತೆ ಈಗ ಧನ ಸಹಾಯ ಮಾಡುವುದನ್ನು ಏತಕ್ಕೆ ನಿಲ್ಲಿಸಿದ್ದೀರಿ ಎಂದು.

ಶ್ರೀ ಕೆ. ಗಂಗಾಧರ್.– ಮಾನ್ಯ ಅಧ್ಯಕ್ಷರೆ, ಯಾವ ವರ್ಷ ಧನಸಹಾಯವನ್ನು ಮಾಡಿದ್ದೇವೆ ಎನ್ನುವುದರ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಮತ್ತು ಸರ್ಕಾರದಿಂದ ತೆಗೆದು ಕೊಂಡಂತಹ ಹಣವನ್ನು ಅವರು ಸರಿಯಾದ ರೀತಿಯಲ್ಲಿ ವಾಪಸ್ಸು ಮಾಡುತ್ತಿಲ್ಲವಾದ್ದರಿಂದ ನಾವು ಈಗ ಹಣವನ್ನು ಕೊಡುತ್ತಿಲ್ಲ. ಮತ್ತೆ ಈಗ ಚಿಕ್ಕಜಾಜೂರು ಗ್ರಾಮದ ಚಲನಚಿತ್ರ ಮಂದಿರವನ್ನು ಮಾರುವಂತಹ ಪರಿಸ್ಥಿತಿ ಬಂದಿದೆ.

ಶ್ರೀ ಪಿ. ರಾಮದೇವ್.– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ತಯಾರಿಸಿದಂತಹ ಕನ್ನಡ ಚಲನಚಿತ್ರಕ್ಕೆ ಬೆಂಗಳೂರು ನಗರದಲ್ಲಿ ಚಿತ್ರಮಂದಿರ ಸಿಗಲಿಲ್ಲ ಎನ್ನುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಮತ್ತು ಕನ್ನಡ ಚಲನಚಿತ್ರಗಳನ್ನು ಇಂತಿಷ್ಟು ವಾರಗಳ ಕಾಲ ನಿಗದಿಯಾಗಿ ಓಡಿಸ ಬೇಕು ಎಂದು ಸರ್ಕಾರದ ಆಜ್ಞೆ ಇದ್ದರೂ ಸಹ ಚಿತ್ರಮಂದಿರಗಳವರು ಸಹಕರಿಸುತ್ತಿಲ್ಲವಾದರಿಂದ ಅಂತಹವರ ಲೈಸನ್ಸ್ ಕ್ಯಾನ್ಸಲ್ ಮಾಡುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಕೆ. ಗಂಗಾಧರ್.– ಮಾನ್ಯ ಅಧ್ಯಕ್ಷರೇ ಕಾನೂನಿನ ಪ್ರಕಾರ ಸರ್ಕಾರದವರು ಲೈಸೆನ್ಸ್ ಕ್ಯಾನ್ಸಲ್ ಮಾಡುವುದಕಾಗುವುದಿಲ್ಲ. ಮಾನ್ಯ ಸದಸ್ಯರು ಪ್ರತ್ಯೇಕವಾದಂತಹ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್ ಗಂಗಾಧರನ್.– ಮಾನ್ಯ ಅಧ್ಯಕ್ಷರೇ ನಮ್ಮ ಸರ್ಕಾರದವರು ಸುಮಾರು ೪ ಚಲನಚಿತ್ರ ಮಂದಿರಗಳನ್ನು ತಯಾರು ಮಾಡಿದ್ದಾರೆಂದು ನಮ್ಮ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಈ ನಾಲ್ಕು ಚಿತ್ರಗಳನ್ನು ೧೯೮೦ನೇ ಇಸವಿಗಿಂತ ಮುಂಚಿತವಾಗಿ ತಯಾರು ಮಾಡಿದ್ದಾರೆಯೇ ಅಥವಾ ಅದಕ್ಕಿಂತ ಹಿಂದೆಯೇ ತಯಾರು ಮಾಡಿದ್ದಾರೆಯೇ ಮತ್ತು ಪ್ರತಿಯೊಂದು ಚಿತ್ರಕ್ಕೆ ಎಷ್ಟು ಹಣ ಖರ್ಚಾಗಿದೆ ಎನು ವಂತಹ ಮಾಹಿತಿಯನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರಾ?

ಶ್ರೀ ಕೆ. ಗಂಗಾಧರ್.– ಮಾನ್ಯ ಅಧ್ಯಕ್ಷರೇ, ೧೯೮೦ನೇ ಇಸವಿಯ ಮುಂಚೆ ತೆಗೆದುಕೊಂಡಿದ್ದೇವೆ. ಅದಕ್ಕಿಂತ ಹಿಂದೆ ತೆಗೆದುಕೊಂಡಿಲ್ಲ. ಒಂದೊಂದು ಚಿತ್ರಕ್ಕೂ ಎಷ್ಟೆಷ್ಟು ಹಣ ಖರ್ಚಾಗಿದೆ ಎನ್ನುವಂತಹ ಮಾಹಿತಿ ಈಗ ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಒದಗಿಸಿಕೊಡುತ್ತೇನೆ.

Ayurvedic Hospitals in Afzalpur taluk.

274 SRI M. Y. HATIL (Afzalpur).– Will the Minister for Health and Family Welfare be pleased state.–

(a) the number of Ayurvedic Hospitals in Afzalpur taluk,